## ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಶ್ರೀ ಜಗನ್ನಾಥ ಮಜಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಖರೀದಿಸಿರುವ ಬಗ್ಗೆ ಇಲಾಖಾ ವಿಚಾರಣೆ, ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸುವ ಬಗ್ಗೆ- ಆದೇಶ.

*ಓದಲಾಗಿದೆ:*

1. ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ-4147/2014/ಎಆರ್‌ಇ-5, ದಿ:09.2.2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 22 ಇಎನ್‌ಕ್ಯೂ 17, ದಿ:04.3.2017.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ಕ್ಯೂ/14-ಎ/441/2017/ಎಆರ್‌ಇ-10, ದಿ:30.7.2018. ಇದರೊಂದಿಗೆ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಇತರೆ ದಾಖಲೆಗಳು.
4. ಎರಡನೇ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 22 ಇಎನ್‌ಕ್ಯೂ 17, ದಿನಾಂಕ:09.8.2018.
5. ಶ್ರೀ ಜಗನ್ನಾಥ ಮಜಗೆ ಇವರ ವಿವರಣೆ ದಿನಾಂಕ:27.8.2018

***ಪ್ರಸ್ತಾವನೆ:-***

ಶ್ರೀ ಸೂರ್ಯಕಾಂತ ತಂದೆ ವೀರಶೆಟ್ಟಿ, ಹುಮ್ನನಬಾದ್, ನೌಬಾದ್, ಬೀದರ್ ಜಿಲ್ಲೆ ಇವರು ಲೋಕಾಯುಕ್ತ ಕಛೇರಿಗೆ ಸಲ್ಲಿಸಿದ್ದ ದೂರಿನಲ್ಲಿ ಶ್ರೀ ಜಗನ್ನಾಥ ಮಜಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಅಕ್ರಮ ಆಸ್ತಿ ಸಂಪಾದಿಸಿರುತ್ತಾರೆ ಎಂಬ ಬಗ್ಗೆ ಆರೋಪಿಸಿದ್ದರು. ಸದರಿ ದೂರಿನ ಕುರಿತು ಮಾನ್ಯ ಉಪಲೋಕಾಯುಕ್ತರು ತನಿಖೆ ಕೈಗೊಂಡು ಮೇಲೆ ಓದಲಾದ ಕ್ರಮಾಂಕ (1) ರ ದಿ:09.2.2017 ರಂದು ಸಲ್ಲಿಸಿದ್ದ ಕಲಂ 12 (3) ರ ವರದಿಯಲ್ಲಿ ಶ್ರೀ ಜಗನ್ನಾಥ ತಂದೆ ಶಂಕರಪ್ಪ ಮಜಗೆ ಇವರು ಬಲ್ಲ ಮೂಲಗಳಿಗಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವುದು, ಸದರಿ ಆಸ್ತಿಯನ್ನು ಹೊಂದಿರುವ ಬಗ್ಗೆ ಖರೀದಿಸಿರುವ ಹಾಗೂ ಮಾರಾಟ ಮಾಡಿರುವ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದಿರುವುದು ಕಂಡು ಬರುವುದಿಲ್ಲವೆಂದು, ಅಪಾದಿತರು ಬಲ್ಲ ಆದಾಯ ಮೂಲಗಳಿಗಿಂತ ಹೆಚ್ಚಿನ ಆಸ್ತಿ ಹೊಂದಿರುವುದು ಮೇಲ್ನೋಟಕ್ಕೆ ಕಂಡು ಬರುವುದಲ್ಲದೆ, ಸದರಿ ಆಸ್ತಿಯನ್ನು ಅರ್ಜಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ವರದಿ ಸಲ್ಲಿಸದೇ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1) ನ್ನು ಉಲ್ಲಂಘಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ 11 ರ ಅನುಸಾರ ವಿಚಾರಣೆ ನಡೆಸಲು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತರು ಸರ್ಕಾರವನ್ನು ಕೋರಿದ್ದರು.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ಕಲಂ 12(3)ವರದಿ ಹಾಗೂ ಅದರೊಂದಗಿನ ತನಿಖಾ ವರದಿಯನ್ನು ಪರಿಶೀಲಿಸಿ, ವರದಿಯಲ್ಲಿ ಉಲ್ಲೇಖಿಸಲಾದ ಆರೋಪಗಳು ಮೇಲ್ನೋಟಕ್ಕೆ ಸಾಭೀತಾಗುತ್ತದೆ ಎಂದು ಕಂಡು ಬಂದ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ 11 ರ ಅನುಸಾರ ನಡೆಸಲು ಸದರಿ ನಿಯಮಗಳ ನಿಯಮ 14ಎ ರ ಅನುಸಾರ ಮೇಲೆ ಓದಲಾದ ಕ್ರಮಾಂಕ(2) ರ ದಿ:04.3.2017 ರ ಆದೇಶದಲ್ಲಿ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮಾನ್ಯ ಉಪಲೋಕಾಯುಕ್ತರು ಈ ಪ್ರಕರಣದಲ್ಲಿ ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವರದಿಯನ್ನು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ್ದು ನಿಬಂಧಕರು, ಕರ್ನಾಟಕ ಲೋಕಾಯುಕ್ತ ರವರು ಮೇಲೆ ಓದಲಾದ ಕ್ರಮಾಂಕ (3) ರ ಪತ್ರದೊಂದಿಗೆ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಮತ್ತು ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಚಾರಣಾ ವರದಿ ಮತ್ತು ಇತರೆ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಶ್ರೀ ಜಗನ್ನಾಥ ಮಜಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ಜಾರಿ ಮಾಡಲಾದ ಆರೋಪ ಪಟ್ಟಿಯಲ್ಲಿ ಮಾಡಲಾದ ಆರೋಪಗಳು ಈ ಕೆಳಕಂಡಂತಿವೆ:-

" That you DGO Sri Jaganatha S/o Shankarappa Majage, Assistant executive engineer, PRE sub division, Santapur, Aurad Taluk has ammessed wealth dispportiaonate to the known sources of income by 132.17% and the movable and immovable properties possessed by you DGO is not informed to the competent Authority, no permission was obtained through the Competative Authority to Acquiry immovable property no permission is obtained from the competitive Authority to possess all the immovable properties, you have not submitted reply or comments though you have recived the letter. Thus, you DGO, being Government /public servent has failed to maintain absolute integrity besides devotion to duty and acted in a manner unbecoming of a Government servent and thus committed miscondect as enumerated Under Rule 3(1) (i) to (iii) of Karnataka Civil Services (Conduct) Rules 1966"

ಮೇಲಿನ ಆರೋಪಗಳ ಕುರಿತು ವಿಚಾರಣಾಧಿಕಾರಿಗಳು ವಿಚಾರಣೆ ಕೈಗೊಂಡಿದ್ದು, ಶಿಸ್ತು ಪ್ರಾಧಿಕಾರದ ಪರ ಎರಡು ಸಾಕ್ಷಿಗಳು ಹಾಗೂ 17 ದಾಖಲೆಗಳನ್ನು ಪರಿಶೀಲಿಸಿರುತ್ತಾರೆ. ಆಪಾದಿತರು ವಿಚಾರಣೆಗೆ ಹಾಜರಾಗಿ ಆರೋಪಗಳ ಕುರಿತು ರಕ್ಷಣಾತ್ಮಕ ಹೇಳಿಕೆಯನ್ನಾಗಲಿ ಹಾಗೂ ಆರೋಪಗಳನ್ನು ಅಲ್ಲಗೆಳೆಯಲು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ವಿಚಾರಣಾಧಿಕಾರಿಗಳು ಆರೋಪಿತರ ಗೈರು ಹಾಜರಿಯಲ್ಲಿ (exparte) ಅಂತಿಮ ನಿರ್ಣಯ ಕೈಗೊಂಡು ಆಪಾದಿತರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುತ್ತವೆ ಎಂದು ನಿರ್ಣಯಕ್ಕೆ ಬಂದಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾಧಿಕಾರಿಗಳ ನಿರ್ಣಯಕ್ಕೆ ಸಹಮತಿ ವ್ಯಕ್ತಪಡಿಸಿ, ಶ್ರೀ ಜಗನ್ನಾಥ ಮಜಗೆ ಇವರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾಧಿಕಾರಿಗಳು 1ನೇ ದೂರುದಾರರಾದ ಶ್ರೀ ಸೂರ್ಯಕಾಂತ ಇವರ ಹೇಳಿಕೆ ಹಾಗೂ 2 ನೇ ಸಾಕ್ಷಿಯಾದ ಶ್ರೀ ಡಾ:ಸುಧಾಕರ್, ಪೋಲೀಸ್ ಇನ್ಸ್‌ಪೆಕ್ಟರ್ ಇವರ ಹೇಳಿಕೆಗಳನ್ನು ಹಾಗೂ ಇಲಾಖಾ ವಿಚಾರಣೆಯಲ್ಲಿ ಹಾಜರುಪಡಿಸಿದ ವಿವಿಧ ದಾಖಲೆಗಳನ್ನು ಆಧರಿಸಿ ಆರೋಪಗಳು ಸಾಬೀತಾಗಿರುತ್ತವೆ ಎಂಬ ನಿರ್ಣಯಕ್ಕೆ ಬಂದಿರುತ್ತಾರೆ. ಆರೋಪಿತರಾದ ಶ್ರೀ ಜಗನ್ನಾಥ ಮಜಗೆ ಇವರು ವಿಚಾರಣೆಗೆ ಹಾಜರಾಗಿ ಆರೋಪಗಳನ್ನು ಅಲ್ಲಗೆಳೆಯುವುದಾಗಲಿ ಪೂರಕ ದಾಖಲೆಗಳನ್ನಾಗಲಿ ಸಲ್ಲಿಸಿರುವುದಿಲ್ಲ. ಶ್ರೀ ಜಗನ್ನಾಥ ಮಜಗೆ ಇವರಿಗೆ ಜಾರಿ ಮಾಡಿರುವ ಆರೋಪ ಪಟ್ಟಿಯಲ್ಲಿ ಶೇ 132.17 % ರಷ್ಟು ಅಕ್ರಮ ಆಸ್ತಿ ಹೊಂದಿರುವ ಬಗ್ಗೆ ಆರೋಪವಿದ್ದರು ವಿಚಾರಣಾಧಿಕಾರಿಗಳು ಈ ಕೆಳಕಂಡ 9 ಸ್ಥಿರಾಸ್ತಿಗಳನ್ನು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಅರ್ಜಿಸಿರುವ ಬಗ್ಗೆ ಪರಿಶೀಲಿಸಿ, ವಿಚಾರಣಾ ವರದಿಯಲ್ಲಿ ಆರೋಪಗಳು ಸಾಬೀತಾಗಿರುತ್ತವೆ ಎಂಬ ನಿರ್ಣಯಕ್ಕೆ ಬಂದಿರುತ್ತಾರೆ.

1. ಆಪಾದಿತರ ಪತ್ನಿಯಾದ ಶ್ರೀಮತಿ ಜಯಶ್ರೀ ರವರ ಹೆಸರಿನಲ್ಲಿ ನೌಬಾದ ಗ್ರಾಮದ ಸರ್ವೆ ನಂ.105ರಲ್ಲಿ 5 ಎಕರೆ 06 ಗುಂಟೆ ಜಮೀನನ್ನು ಮತ್ತು ಗೋರನಳ್ಳಿ ಗ್ರಾಮದ ಸರ್ವೆ ನಂ.41ರಲ್ಲಿ ಎಕರೆ ಜಮೀನನ್ನು ಮತ್ತು ಸರ್ವೆ ನಂ. 9/1ರಲ್ಲಿ 7 ಎಕರೆ 20 ಗುಂಟೆ ಜಮೀನನ್ನು ಸರ್ವೇ ನಂ.9/2 ರಲ್ಲಿ 2 ಎಕರೆ ಜಮೀನನ್ನು ಹೊಂದಿರುವುದು.
2. ಆಪಾದಿತರ ತಂದೆಯವರಾದ ಶ್ರೀ ಶಂಕ್ರೆಪ್ಪ ರವರ ಹೆಸರಿನಲ್ಲಿ ಸರ್ವೆ ನಂ.41/ಬಿರಲ್ಲಿ 3 ಎಕರೆ 06 ಗುಂಟೆ ಜಮೀನನ್ನು ಮತ್ತು ಸರ್ವೆ ನಂ.15/1ರಲ್ಲಿ 15 ಗುಂಟೆ ಎಕರೆ ಜಮೀನನ್ನು ಮತ್ತು ಆಪಾದಿತರ ಮಗನಾದ ಶೈಲೆಸ ರವರ ಹೆಸರಿನಲ್ಲಿ ಚಿದ್ರಿ ಗ್ರಾಮದ ಸರ್ವೆ ನಂ.15/1/2/5ರಲ್ಲಿ 5 ಗುಂಟೆ ಜಮೀನನ್ನು ಹೊಂದಿರುವುದು.
3. ಆಪಾದಿತರ ಹೆಸರಿನಲ್ಲಿ ಸರ್ವೆ ನಂ.59/2ರಲ್ಲಿ 8 ಎಕರೆ 22 ಗುಂಟೆ ಜಮೀನನ್ನು ಮತ್ತು ಸರ್ವೆ ನಂ.9ರಲ್ಲಿ 2 ಎಕರೆ 8 ಗುಂಟೆ ಜಮೀನನ್ನು ಹೊಂದಿರುವ ಬಗ್ಗೆ.

---3

4. ಆಪಾದಿತರ ತಾಯಿಯವರಾದ ಶ್ರೀಮತಿ ತೇಜಮ್ಮಾ ರವರ ಹೆಸರಿನಲ್ಲಿ ಸಿಎಂಸಿ ನಂ.19-1-528, 8 ಮತ್ತು 9 ಮತ್ತು ರಂಗಮಂದಿರದ ಹತ್ತಿರ ಒಂದು ಮನೆಯನ್ನು ಹೊಂದಿರುವ ಬಗ್ಗೆ.
5. ಬಸವಕಲ್ಯಾಣದಲ್ಲಿ ಒಂದು ಮನೆಯನ್ನು, ಮೈಲೂರ ರೋಡಿನ ವಾಟರ್ ಟ್ಯಾಂಕ್ ಹತ್ತಿರ ಸಿಎಂಸಿ ನಂ.19/13//36 ಎಂಬ ಆಸ್ತಿಯನ್ನು ವಂಗಂಪಲ್ಲಿ ಬ್ರದರ್ಸ್ ರವರಿಗೆ ಮಾರಾಟ ಮಾಡಿರುವ ಮತ್ತು ಬೆಂಗಳೂರಿನಲ್ಲಿ ಒಂದು ಫ್ಲಾಟ್ ಹೊಂದಿರುವ ಬಗ್ಗೆ.
6. ಆಪಾದಿತರು ವಿವಿಧ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಬ್ಯಾಲೆನ್ಸ್ ಹೊಂದಿದ್ದು, ಬಂಗಾರ ಮತ್ತು ಬೆಳ್ಳಿಯನ್ನು ಹೊಂದಿರುವ ಬಗ್ಗೆ.
7. ಆಪಾದಿತರು ನೌಬಾದ ಸರ್ವೆ ನಂ.105ರಲ್ಲಿ 5 ಎಕರೆ 6 ಗುಂಟೆ ಜಮೀನನ್ನು ಅವರ ಅತ್ತೆಯಾದ ಗಂಗಮ್ಮಾ ರವರ ಹೆಸರಿನಲ್ಲಿ ಖರೀದಿಸಿ ನಂತರ ಅದನ್ನು ಪತ್ನಿಯಾದ ಜಯಶ್ರೀ ರವರಿಗೆ ಕಾಣಿಕೆ ನೀಡಿ ಅದನ್ನು ಕೃಷಿಯೇತರ ಜಮೀನೆಂದು ಪರಿವರ್ತಿಸಿರುತ್ತಾರೆಂಬ ಬಗ್ಗೆ.
8. ಆಪಾದಿತರು ಗೋರನಳ್ಳಿ ಗ್ರಾಮದ ಸರ್ವೆ ನಂ.41/ಎರಲ್ಲಿ 1 ಎಕರೆ 30 ಗುಂಟೆ ಜಮೀನನ್ನು ಅವರ ಅತ್ತೆಯಾದ ಗಂಗಮ್ಮಾ ರವರ ಹೆಸರಿನಲ್ಲಿ ಖರೀದಿಸಿ ನಂತರ ಅದನ್ನು ಪತ್ನಿಯಾದ ಜಯಶ್ರೀ ರವರಿಗೆ ಕಾಣಿಕೆ ನೀಡಿ ಅದನ್ನು ಕೃಷಿಯೇತರ ಜಮೀನೆಂದು ಪರಿವರ್ತಿಸಿರುತ್ತಾರೆಂಬ ಹಾಗೂ ಅವರ ತಂದೆಯಾದ ಶಂಕರಪ್ಪ ರವರ ಹೆಸರಿನಲ್ಲಿ ಸರ್ವೆ ನಂ.41/ಬಿ ರಲ್ಲಿ 3 ಎಕರೆ 18 ಗುಂಟೆ ಜಮೀನನ್ನು ಹೊಂದಿರುತ್ತಾರೆಂಬ ಬಗ್ಗೆ.
9. ಹಮೀಲಾಪುರ ಗ್ರಾಮದ ಸರ್ವೆ ನಂ.9/ಎ-1ರಲ್ಲಿ 7 ಎಕರೆ 20 ಗುಂಟೆ ಜಮೀನನ್ನು ಪತ್ನಿಯಾದ ಜಯಶ್ರೀ ರವರ ಹೆಸರಿನಲ್ಲಿ, ಮರೂರ ಗ್ರಾಮದ ಸರ್ವೆ ನಂ.198/ಎಎರಲ್ಲಿ 2 ಎಕರೆ 08 ಗುಂಟೆ, ಚಿಕಲಚಂದಾ ಗ್ರಾಮದ ಸರ್ವೆ ನಂ.59ರಲ್ಲಿ 8 ಎಕರೆ ಜಮೀನನ್ನು ತಂದೆಯವರಾದ ಶಂಕರಪ್ಪ ರವರ ಹೆಸರಿನಲ್ಲಿ ಹೊಂದಿರುವ ಮತ್ತು ಇತರೆ.

ವಿಚಾರಣಾ ವರದಿಯ ಕುರಿತು ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಶ್ರೀ ಜಗನ್ನಾಥ ಮಜಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರಿಗೆ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನೊಂದಿಗೆ ಮೇಲೆ ಓದಲಾದ ಕ್ರಮಾಂಕ (4) ರಲ್ಲಿ 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು. ಸದರಿಯವರು ಮೇಲೆ ಓದಲಾದ ಕ್ರಮಾಂಕ (5) ರಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ವಿವರಣೆ ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿ ತಮ್ಮ ಮೇಲೆ ಹೊರಿಸಲಾದ ಆರೋಪಗಳಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ.

1. Details of plots and land sold out income details
2. Agriculture income details.
3. Rental income details.
4. Salary income details.
5. Details of assets ( Purchased and gifted)
6. Annual property returns.
7. Departmental permission
8. Details of property bearing CMS No-19/13/36
9. Bank Account detals.

ಶ್ರೀ ಜಗನ್ನಾಥ ಮಜಗೆ ಇವರು ಸಲ್ಲಿಸಿರುವ ವಿವರಣೆ, ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಮೇಲೆ ತಿಳಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಶ್ರೀಯುತರು ತಮ್ಮ ಸೇವಾ ಅವಧಿಯಲ್ಲಿ ಗಳಿಸಿರುವುದು, ಕಾಣಿಕ ರೂಪದಲ್ಲಿ ಪಡೆದಿರುವಂತಹವುಗಳಾಗಿರುತ್ತವೆ. ಸದರಿ ಆಸ್ತಿಗಳನ್ನು ಅರ್ಜಿಸುವ ಅಥವಾ ದಾನ, ಕಾಣಿಕೆ ಪಡೆಯುವ ಪೂರ್ವದಲ್ಲಿ ಅಥವಾ ನಂತರ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದಿರುತ್ತಾರೆಯೇ ಎಂಬ ಬಗ್ಗೆ ಸದರಿಯವರು ತಮ್ಮ ವಿವರಣೆಯೊಂದಿಗೆ ಸಲ್ಲಿಸಿರುವ ಎಲ್ಲಾ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಲಾಗಿ ಸ್ಥಿರಾಸ್ತಿಗಳನ್ನು ಖರೀದಿಸಲು ಅಥವಾ ಕಾಣಿಕೆ ಪಡೆಯಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಬೀದರ್ ಇವರು ಅನುಮತಿ ನೀಡಿರುವುದು ಕಂಡು ಬರುತ್ತದೆ. ಶ್ರೀ ಜಗನ್ನಾಥ ಮಜಗೆ ಕಿರಿಯ ಇಂಜಿನಿಯರ್ ಇವರ ನೇಮಕಾತಿ ಪ್ರಾಧಿಕಾರವು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೀದರ್‌ರವರಾಗಿದ್ದು ಮೇಲೆ ತಿಳಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಅರ್ಜಿಸಲು ಅಥವಾ ಕಾಣಿಕೆ ಪಡೆಯಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮತಿ ಪಡೆಯಬೇಕಾಗಿತ್ತು. ಅದರೆ ಉಪವಿಭಾಗದ ಸ.ಕಾ.ಇಂ ಇವರು ಅನುಮತಿ ನೀಡಿರುವ ಕ್ರಮವು ಅಂಗಿಕಾರ್ಹವಾಗಿರುವುದಿಲ್ಲ.

---4

ಇನ್ನೊಂದು ಅಂಶವೆಂದರೆ, ಶ್ರೀ ಜಗನ್ನಾಥ ಮಜಗೆ, ಹಿಂದಿನ ಕಿರಿಯ ಇಂಜಿನಿಯರ್ ಇವರು ಆಯಾಯ ವರ್ಷದ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸಮುಚಿತ ಮಾರ್ಗದ ಮೂಲಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಬೇಕಾಗಿದ್ದು ಅದರೆ 1991-92 ನೇ ಸಾಲಿನಿಂದ 2011-2012 ನೇ ಸಾಲಿನವರಗೆ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಬೀದರ್ ಇವರಿಗೆ ಸಲ್ಲಿಸಿರುವ ಬಗ್ಗೆ ಹಾಗೂ 2012-13 ರಿಂದ 2015-16 ರವರಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಪಂ, ಬೀದರ್ ಇವರಿಗೆ ಸಲ್ಲಿಸಿರುವ ಬಗ್ಗೆ ತಿಳಿಸಿ ಅವುಗಳ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಅದರೆ ಸಲ್ಲಿಸಿರುವ ಬಗ್ಗೆ ಯಾವುದೇ ಸ್ವೀಕೃತಿಗಳನ್ನು ಸಲ್ಲಿಸಿರುವುದಿಲ್ಲ. ಸದರಿ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಅಂಗೀಕರಿಸಿ, ಟಿಪ್ಪಣಿ ಮಾಡಿಕೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಶ್ರೀ ಜಗನ್ನಾಥ ಮಜಗೆ ಇವರು 2 ನೇ ಕಾರಣ ಕೇಳುವ ನೋಟಿಸ್‌ಗೆ ಸಲ್ಲಿಸಿರುವ ವಿವರಣೆ/ದಾಖಲೆಗಳನ್ನು ವಿಚಾರಣಾಧಿಕಾರಿಗಳ ಮುಂದೆ ಮುಂಡಿಸಿ ತಮ್ಮ ಆಹವಾಲು/ವಿವರಣೆಯನ್ನು ಸಲ್ಲಿಸಬಹುದಾಗಿತ್ತಾದರೂ ವಿಫಲರಾಗಿ ಅವಕಾಶ ವ್ಯರ್ಥ ಮಾಡಿ ಕೊಂಡಿದ್ದಾರೆ.

ಇದರಿಂದಾಗಿ, ಶ್ರೀ ಜಗನ್ನಾಥ ಮಜಗೆ ಇವರು ಮೇಲ್ಕಂಡ ಸ್ಥಿರಾಸ್ತಿಗಳನ್ನು ಅರ್ಜಿಸುವ ಪೂರ್ವದಲ್ಲಿ ಅಥವಾ ನಂತರ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದಿದ್ದರು ಎಂಬುದಾಗಲಿ ಸದರಿಯವರು ಪ್ರತಿ ವರ್ಷ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿ, ಸದರಿ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರವು ಅಂಗೀಕರಿಸಿದ್ದರು ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಶ್ರೀ ಜಗನ್ನಾಥ ಮಜಗೆ ಇವರು ಸಾರ್ವಜನಿಕ ಸೇವೆಗೆ ಸೇರಿದ ನೌಕರರಾಗಿದ್ದು ಸದರಿಯವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸ್ಥಿರಾಸ್ತಿಗಳನ್ನು ಅರ್ಜಿಸಿರುವ ಆರೋಪವು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಆದ್ದರಿಂದ, ವಿಚಾರಣಾಧಿಕಾರಿಯವರ ನಿರ್ಣಯವನ್ನು ಅಂಗೀಕರಿಸಿ ಶ್ರೀ ಜಗನ್ನಾಥ ಮಜಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿರುದ್ಧ ಸಾಭೀತಾಧ ಆರೋಪಗಳ ಗಂಭೀರತೆಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ..

## ಆದೇಶ ಸಂಖ್ಯೆ: ಗ್ರಾಅಪ 22 ಇಎನ್‌ಕ್ಯೂ 2017, ಬೆಂಗಳೂರು, ದಿನಾಂಕ:28.11.2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಜಗನ್ನಾಥ ಮಜಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-2) (ನಿಯಮ-32 ರಡಿ ಸ್ವತಂತ್ರ ಪ್ರಭಾರ) ಇವರ ವಿರುದ್ಧ ಸಾಭೀತಾಗಿರುವ ಆರೋಪಗಳ ಗಂಭೀರತೆಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8 (iii) ರನ್ವಯ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವುದು ಹಾಗೂ ಸದರಿಯವರು ಮುಂಬಡ್ತಿಗೆ ಆರ್ಹವಾದ ದಿನಾಂಕದಿಂದ ಮುಂದಿನ ನಾಲ್ಕು ವರ್ಷಗಳ ಅವಧಿಗೆ ಅವರನ್ನು ಮುಂಬಡ್ತಿಗೆ ಅನರ್ಹಗೊಳಿಸುವ ದಂಡನೆಯನ್ನು ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 28/11/2018
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್.
5. ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ.

6. ಶ್ರೀ ಜಗನ್ನಾಥ ಮಜಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಅಫ್‌ಜಲ್‌ಪುರ.
7. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
9. ಶಾಖಾ ರಕ್ಷಾ ಕಡತೆ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.